**ಉಪನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಮಂಡ್ಯ ಜಿಲ್ಲೆ, ಮಂಡ್ಯ.**

ಸಂಖ್ಯೆ:ಎ2/1098/ರೆಡ್.ಕ್ರಾಸ್.ಪ/24/2025-2026 3572 ದಿನಾಂಕ:11-11-2025

**-: ಜ್ಞಾಪನ :-**

ವಿಷಯ:-ರಾಜ್ಯದ ಎಲ್ಲಾ ಸರ್ಕಾರಿ/ಅನುದಾನ/ಅನುದಾನರಹಿತ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಜೂನಿಯರ್ ರೆಡ್ ಕ್ರಾಸ್ ಪರೀಕ್ಷೆಯ ಬಗ್ಗೆ.

ಉಲ್ಲೇಖ:-1).ಪ್ರಧಾನ ಕಾರ್ಯದರ್ಶಿಗಳು(ಪ್ರಭಾರ) ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ಬೆಂಗಳೂರು ರವರ ಪತ್ರ ದಿ:03-11-2025.

2).ಸರ್ಕಾರದ ಪ್ರಧನ ಕಾರ್ಯದರ್ಶಿ,ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ. ಬೆಂಗಳೂರು ರವರ ಪತ್ರ ದಿ:01-07-2025.

***-***-***-***

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಮಂಡ್ಯ ಜಿಲ್ಲೆಯ ಎಲ್ಲಾಪ್ರೌಢಶಾಲೆಗಳಲ್ಲಿ ರೆಡ್ ಕ್ರಾಸ್ ಸಂಸ್ಥೆಯವರುರೆಡ್ ಕ್ರಾಸ್ ಕಾರ್ಯ ಚಟುವಟಿಕೆಗಳ ಬಗ್ಗೆ ಅರಿವು ಮೂಡಿಸಲು ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಜೂನಿಯರ್ ರೆಡ್ ಕ್ರಾಸ್ ಪರೀಕ್ಷೆಯನ್ನು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ರಾಜ್ಯ ಶಾಖೆಯಿಂದ **ದಿ:06-12-2025 ರಂದು ಶನಿವಾರ ಬೆಳಿಗ್ಗೆ 10:00 ರಿಂದ 12:00 ಗಂಟೆಯವರೆಗೆ** ನಡೆಸುವ ಉಲ್ಲೇಖ(1) ಪತ್ರದಲ್ಲಿ ಕಳುಹಿಸಿರುವ ರೆಡ್ ಕ್ರಾಸ್ ಪರೀಕ್ಷೆಯ 50 ಸುತೋಲೆ ಹಾಗೂ ಕರ ಪತ್ರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ ತಮ್ಮ ವ್ಯಾಪ್ತಿಯ ಶಾಲೆಗಳಿಂದ ವಿದ್ಯಾರ್ಥಿಗಳನ್ನು ಈ ರೆಡ್ ಕ್ರಾಸ್ ಪರೀಕ್ಷೆಯಲ್ಲಿ ಭಾಗವಹಿಸುವಂತೆ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ

ಉಲ್ಲೇಖ(2)ರ ಪತ್ರದ ಆದೇಶದಂತೆ ಶಾಲಾ ಅವಧಿಯಲ್ಲಿ ರೆಡ್ ಕ್ರಾಸ್ ಪರೀಕ್ಷೆಯನ್ನು ನಡೆಸಲು ಅವಕಾಶವಿಲ್ಲವಾದ ಕಾರಣ **ದಿ:06-12-2025 ರಂದು ಶನಿವಾರ 01:00 ಗಂಟೆಯ ನಂತರ ಪೋಷಕರ ಒಪ್ಪಿಗೆ ಪಡೆದು** ವಿದ್ಯಾರ್ಥಿಗಳು ಜೂನಿಯರ್ ರೆಡ್ ಕ್ರಾಸ್ ಪರೀಕ್ಷೆಯಲ್ಲಿ ಭಾಗವಹಿಸುವಂತೆ ಕ್ರಮ ಕೈಗೊಳ್ಳಲು ತಿಳಿಸಿ ಹಾಗೂ ಪರೀಕ್ಷೆಯ ಶುಲ್ಕ ಮತ್ತು ಪುಸ್ತಕದ ಶುಲ್ಕವನ್ನು ಸಾಫ್ಟ್‌ವೇರ್ ಮೂಲಕ ಪಾವತಿಸಲು ಈ ಬಾರಿ ಅಧಿಕೃತ ವೆಬ್ ಸೈಟ್ www.redcrosskarnataka.org ಮೂಲಕ ಅವಕಾಶ ಕಲ್ಪಿಸಲಾಗಿದೆ. ಅದರಂತೆ ಪಾವತಿಮಾಡುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಸುತ್ತೋಲೆ ಮತ್ತು ಕರ ಪತ್ರಗಳನ್ನು ಪರಿಶೀಲಿಸಲು ತಿಳಿಸಿದೆ.

ಉಪನಿರ್ದೇಶಕರು,
ಶಾಲಾ ಶಿಕ್ಷಣ ಇಲಾಖೆ,ಮಂಡ್ಯ.

ಗೆ

1).ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ

2).ಪ್ರತಿಯನ್ನು ಪ್ರಧಾನ ಕಾರ್ಯದರ್ಶಿಗಳು ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಕರ್ನಾಟಕ ಬೆಂಗಳೂರು ರವರಿಗೆ ಮಾಹಿತಿಗಾಗಿ

3).ಕಛೇರಿ ಪ್ರತಿ.

INDIAN RED CROSS SOCIETY KARNATAKA STATE BRANCH
128
Date 20/11/25